ಕರ್ನಾಟಕ ಸರ್ಕಾರ
(ವಾಣಿಜ್ಯ ತೆರಿಗೆಗಳ ಇಲಾಖೆ)

ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರವರ ಕಛೇರಿ (ಆಡಳಿತ) ವಿ.ಸ & ಸೇ. ತೆ-3, ಕೊಠಡಿ
ಸಂಖ್ಯೆ: 205, 2ನೇ ಮಹಡಿ, ಟಿ.ಟಿ.ಎಂ.ಸಿ. ಬಿ-ಬ್ಲಾಕ್, ಶಾಂತಿನಗರ,
ಬೆಂಗಳೂರು-560027. ದೂರವಾಣಿ: 080-22221048, ಫ್ಯಾಕ್ಸ್: 080-22221184.

ಸಂಖ್ಯೆ : **JCCT/DGSTO-3/D1/C.R-15 /17-18** ದಿನಾಂಕ: 03/08/2017.

**<u>ತಿದ್ದುಪಡಿ ಟೆಂಡರ್ ಪ್ರಕಟಣೆ</u>**

***ದಿನಾಂಕ: 29/07/2017 ರ ಟೆಂಡರ್ ಪ್ರಕಟಣೆಯಲ್ಲಿ ಈ ಕೆಳಕಂಡ ತಿದ್ದುಪಡಿಗಳನ್ನು ಓದಿಕೊಳ್ಳತಕ್ಕದ್ದು,***

- ಇಲಾಖಾ ಅಂತರ್ಜಾಲದಲ್ಲಿ ಪ್ರಕಟಿಸಿದಂತೆ ವಾಹನದ ಮಾದರಿಯನ್ನು 2013 ಮತ್ತು ನಂತರದ್ದಾಗಿರತಕ್ಕದ್ದು, ಎಂಬುದನ್ನು 2012 ಮತ್ತು ನಂತರದ ಮಾದರಿಯ ಖಾಸಗಿ ವಾಹನ ಎಂದು ಓದಿಕೊಳ್ಳತಕ್ಕದ್ದು.
- ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 05/08/2017 ರ ಸಮಯ ಸಂಜೆ 5.00 ಗಂಟೆ ಎಂಬುದರ ಬದಲಾಗಿ ದಿನಾಂಕ: 09/08/2017 ರ ಸಮಯ ಸಂಜೆ 5.00 ಗಂಟೆ ಎಂದು ಓದಿಕೊಳ್ಳತಕ್ಕದ್ದು.
- ಟೆಂಡರ್ ತೆರೆಯುವ ಕೊನೆಯ ದಿನಾಂಕ: 07/08/2017 ರ ಸಮಯ ಬೆಳಿಗ್ಗೆ 11.30 ಗಂಟೆ ಎಂಬುದರ ಬದಲಾಗಿ ದಿನಾಂಕ: 10/08/2017 ರ ಸಮಯ ಬೆಳಿಗ್ಗೆ 11.30 ಗಂಟೆ ಎಂದು ಓದಿಕೊಳ್ಳತಕ್ಕದ್ದು.
- ಟೆಂಡರ್ ವಿವರಗಳನ್ನು ವಾಣಿಜ್ಯ ತೆರಿಗೆ ಇಲಾಖೆಯ ವೆಬ್‌ಸೈಟ್ **<u>http://ctax.kar.nic.in</u>** ಮೂಲಕ ಪಡೆಯಬಹುದಾಗಿರುತ್ತದೆ.

ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು (ಆಡಳಿತ),
ವಿ. ಸ & ಸೇ. ತೆ-3, ಶಾಂತಿನಗರ, ಬೆಂಗಳೂರು.

ಕರ್ನಾಟಕ ಸರ್ಕಾರ
(ವಾಣಿಜ್ಯ ತೆರಿಗೆಗಳ ಇಲಾಖೆ)

ಸಂಖ್ಯೆ: ಡಿ1/ಸಿ.ಆರ್–15/2017–18

ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರವರ ಕಛೇರಿ(ಆಡಳಿತ),
ವಿ.ಸ & ಸೇ. ತೆ –3, 'ಬಿ' ಬ್ಲಾಕ್, ಟಿ.ಟಿ.ಎಂ.ಸಿ,
2ನೇ ಮಹಡಿ, ಶಾಂತಿನಗರ, ಬೆಂಗಳೂರು, ದಿ: 03/08/2017
ದೂರವಾಣಿ ಸಂಖ್ಯೆ: 22221048, ಫ್ಯಾಕ್ಸ್: 22221184.

# ಟೆಂಡರ್ ಪ್ರಕಟಣೆ

**ವಿಷಯ:** ಸಾಮಾನ್ಯ ಟೆಂಡರ್ ಪ್ರಕಟಣೆಯ ಮುಖೇನ ಮಾಲೀಕರೇ ಚಾಲಕರಾಗಿರುವ ಖಾಸಗಿ ವಾಹನಗಳ ಸೇವೆಯನ್ನು ಒದಗಿಸುವ ಕುರಿತು.

**ಉಲ್ಲೇಖ:** 1. ಮಾನ್ಯ ವಾಣಿಜ್ಯ ತೆರಿಗೆಗಳ ಆಯುಕ್ತರವರ ಸುತ್ತೋಲೆ ಸಂಖ್ಯೆ: ವಿಹೆಚ್‌ಟಿ/ಸಿಆರ್–11/2017–18, ದಿನಾಂಕ: 04/07/2017.

2. ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ/139/ಶಿವಾನಿ/2004, ದಿನಾಂಕ:12/09/2006.

***

ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು(ಆ), ವಿ. ಸ ಮತ್ತು ಸೇ. ತೆ 03, ಶಾಂತಿನಗರ, ಬೆಂಗಳೂರು–27 ಇವರು ವಿಭಾಗದ ಕಛೇರಿಯ ಉಪಯೋಗಕ್ಕಾಗಿ 12 ಖಾಸಗಿ ವಾಹನಗಳನ್ನು ಮಾಸಿಕ ಬಾಡಿಗೆ ಆಧಾರದ ಮೇಲೆ ಪಡೆಯಲು ಉಲ್ಲೇಖಿತ ಮಾನ್ಯ ಆಯುಕ್ತರವರ ಪತ್ರದಲ್ಲಿ ಅನುಮತಿಯನ್ನು ನೀಡಲಾಗಿರುತ್ತದೆ.

ಮಾಲೀಕರೇ ಚಾಲಕರಾಗಿರುವ ಖಾಸಗಿ ವಾಹನಗಳನ್ನು ಹೊಂದಿರುವವರಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಈ ಕೆಳಕಂಡ ಷರತ್ತು ಮತ್ತು ನಿಬಂಧನೆಗಳಿಗೆ ಒಳಪಟ್ಟು ಆಸಕ್ತಿಯುಳ್ಳವರು ಅರ್ಜಿಯನ್ನು ಸಲ್ಲಿಸಬಹುದಾಗಿರುತ್ತದೆ.

1. **ಅರ್ಜಿ ಸಲ್ಲಿಸುವ ವಿಧ** : ದ್ವಿ–ಲಕೋಟೆ ಪದ್ಧತಿ
2. **ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ** : ದಿನಾಂಕ: 09/08/2017 ಸಂಜೆ 5.00 ಗಂಟೆ
3. **ಟೆಂಡರ್ ತೆರೆಯುವ ದಿನಾಂಕ** : ದಿನಾಂಕ: 10/08/2017 ಬೆಳಿಗ್ಗೆ 11.30 ಗಂಟೆ
4. **ವಾಹನದ ಮಾದರಿ:**
   * 2012 ಮತ್ತು ನಂತರದ ಖಾಸಗಿ ವಾಹನ.
   * ಪ್ರತಿ ವಾಹನದ ಗುಣಮಟ್ಟವನ್ನು ಹಾಗೂ ಚಾಲನ ಕೌಶಲ್ಯವನ್ನು ಪರಿಶೀಲಿಸಿ ನಂತರವೇ ವಾಹನಗಳನ್ನು ತೆಗೆದುಕೊಳ್ಳಲಾಗುವುದು.

5. **ಮಾಸಿಕ ಬಾಡಿಗೆಯ ಗರಿಷ್ಠ ಮೊತ್ತ:** ** ಮಾಸಿಕ ಬಾಡಿಗೆಯ ಗರಿಷ್ಠ ಮೊತ್ತ ರೂ. 25,000/-.*

6. **ವಾಹನದ ಗುತ್ತಿಗೆ ಸೇವಾ ಅವಧಿ:** ವಾಹನಗಳನ್ನು ಬಾಡಿಗೆ ಆಧಾರದ ಮೇಲೆ ಈ ವಿಭಾಗಕ್ಕೆ ಒದಗಿಸುವ ಕಾಲಮಿತಿಯು ದಿನಾಂಕ: 16/08/2017 ರಿಂದ 31/07/2018 ರವರೆಗೆ ಇರುತ್ತದೆ, ಅಗತ್ಯವಿದ್ದರೆ ಇವೇ ಷರತ್ತು ಮತ್ತು ನಿಬಂಧನೆಗಳಿಗೆ ಒಳಪಟ್ಟು ಅಥವಾ ಇನ್ನೂ ಹೆಚ್ಚಿನ ಷರತ್ತುಗಳ ಜೊತೆಗೆ ಒಂದು ತ್ರೈಮಾಸಿಕದ ಅವಧಿಗೆ ವಾಹನ ಮಾಲೀಕರು ಮತ್ತು ಈ ಇಲಾಖೆಯ ಆಯುಕ್ತರ ಲಿಖಿತ ಇಚ್ಛೆಯ ಮೇರೆಗೆ ಮುಂದುವರಿಸಬಹುದಾಗಿದೆ. ಇದಕ್ಕೂ ಮೊದಲು ಕರಾರು ರದ್ದುಗೊಳಿಸುವ ಹಕ್ಕು ಮಾನ್ಯ ಆಯುಕ್ತರು / ಜಂಟಿ ಆಯುಕ್ತರವರದ್ದಾಗಿರುತ್ತದೆ.

7. **ಅರ್ಜಿದಾರರ ವೈಯಕ್ತಿಕ ವಿವರಗಳು:**

   - **ಅರ್ಜಿದಾರರ ಹೆಸರು:** ಅರ್ಜಿದಾರರ ಹೆಸರು ದಪ್ಪ ಅಕ್ಷರಗಳಲ್ಲಿ, ಅರ್ಜಿದಾರರ ವಿಳಾಸ ಹಾಗೂ ಇತ್ತೀಚಿನ ಪಾಸ್‌ಪೋರ್ಟ್ ಅಳತೆಯ ಎರಡು ಭಾವಚಿತ್ರಗಳು.
   - **ವಿಳಾಸದ ದಾಖಲೆಗಳು:** ಮತದಾರರ ಗುರುತಿನ ಚೀಟಿ/ರೇಷನ್ ಕಾರ್ಡ್/ಆಧಾರ್ ಕಾರ್ಡ್/ಪಾಸ್ ಪೋರ್ಟ್ ಅಥವಾ ಇತರೆ ಭಾವಚಿತ್ರ ಹೊಂದಿರುವ ಚುನಾವಣಾ ಗುರುತಿನ ಚೀಟಿ ಹಾಗೂ ಖಾಯಂ ವಿಳಾಸ ದಾಖಲೆ.
   - **ಬ್ಯಾಂಕ್ ಖಾತೆಯ ವಿವರಗಳು:** ಉಳಿತಾಯ ಖಾತೆ ಹೊಂದಿರುವ ಬ್ಯಾಂಕಿನ ಹೆಸರು, ವಿಳಾಸ, ಉಳಿತಾಯ ಖಾತೆಯ ಸಂಖ್ಯೆ ಹಾಗೂ ಚೆಕ್ಕಿನ ಪ್ರತಿ.
   - **ಇತರೆ ದಾಖಲಾತಿಗಳು:** ಕಡ್ಡಾಯವಾಗಿ ಪಾನ್‌ಕಾರ್ಡ್ ಮತ್ತು ಆಧಾರ್ ಕಾರ್ಡ್‌ನ ಪ್ರತಿಗಳು ಹಾಗೂ ಮಾಲೀಕರಿಗೆ ಸಂಬಂಧಿಸಿದಂತೆ ಡ್ರೈವಿಂಗ್ ಲೈಸೆನ್ಸ್, ಚಾಲಕರ ದೈಹಿಕ ಸಾಮರ್ಥ್ಯ ಪ್ರಮಾಣ ಪತ್ರ.

8. **ಖಾಸಗಿ ವಾಹನಕ್ಕೆ ಸಂಬಂಧಿಸಿದ ದಾಖಲಾತಿಗಳು:**

   - ವಾಹನದ ನೋಂದಣಿ ಪುಸ್ತಕದ ಪ್ರತಿ.
   - ವಾಹನದ ವಿಮಾ ಪಾಲಿಸಿಯ ಪ್ರತಿ
   - ಪ್ರಾದೇಶಿಕ ಸಾರಿಗೆ ಅಧಿಕಾರಿಗಳು ನೀಡಿರುವ ವಾಹನ ಚಾಲನಾ ಪರವಾನಗಿ ಪ್ರತಿ.
   - ರಸ್ತೆ ತೆರಿಗೆಯನ್ನು (Road Tax) ಸಂಬಂಧಿಸಿದ ಇಲಾಖೆಗೆ ಪಾವತಿಸಿರುವ ವಿವರದ ಪ್ರತಿ
   - ವಾಯು ಮಾಲಿನ್ಯ ಇಲಾಖೆಯವರು ನೀಡುವ ಪ್ರಮಾಣ ಪತ್ರ.

9. **ಟೆಂಡರ್ ಪ್ರಕಟಣೆಯ ಷರತ್ತು ಮತ್ತು ನಿಬಂಧನೆಗಳು**

   - ಈ ಟೆಂಡರ್ ಅಧಿಸೂಚನೆಯಲ್ಲಿ ಇರುವ ಷರತ್ತುಗಳಲ್ಲದೇ ಸುಗಮ ಸೇವೆಯ ನಿರ್ವಹಣೆಗಾಗಿ ಬೇಕಾಗುವ ಇತರೆ ಯಾವುದೇ ಷರತ್ತುಗಳನ್ನು ವಿಧಿಸುವ ಅಧಿಕಾರವನ್ನು ವಾಣಿಜ್ಯ ತೆರಿಗೆಗಳ

ಇಲಾಖೆಯ ಜಂಟಿ ಆಯುಕ್ತರು (ಆಡಳಿತ), ವಿ.ಸ ಮತ್ತು ಸೇ.ತೆ-3, ಶಾಂತಿನಗರ, ಬೆಂಗಳೂರು-560027 ಇವರು ಹೊಂದಿರುತ್ತಾರೆ.

- ಮೇಲ್ಕಂಡ ವಿವರಗಳು ಹಾಗೂ ಎಲ್ಲಾ ದಾಖಲಾತಿಗಳ ಪ್ರತಿಗಳನ್ನು ಸೀಲು ಮಾಡಿದ ಲಕೋಟೆಯಲ್ಲಿಟ್ಟು, ಲಕೋಟೆಯ ಮೇಲೆ ದಪ್ಪ ಅಕ್ಷರದಲ್ಲಿ **"ಮಾಲೀಕರೇ ಚಾಲಕರಾಗಿರುವ ವಾಹನ ಮಾಲೀಕರ ಹೊರಗುತ್ತಿಗೆ ಸೇವೆ "** ಎಂದು ನಮೂದಿಸುವುದು.

- ಪೂರ್ಣ ವಿವರಗಳು ಹಾಗೂ ಮೇಲ್ಕಂಡ ದಾಖಲಾತಿಗಳನ್ನು ಸಲ್ಲಿಸದೇ ಇದ್ದ ಪಕ್ಷದಲ್ಲಿ ಅಂತಹ ಅರ್ಜಿಗಳನ್ನು ತಿರಸ್ಕರಿಸಲಾಗುವುದು.

- ಅರ್ಜಿಯನ್ನು ವಾಣಿಜ್ಯ ತೆರಿಗೆ ಜಂಟಿ ಆಯುಕ್ತರವರ ಕಛೇರಿ(ಆ) ವಿ.ಸ ಮತ್ತು ಸೇ. ತೆ-03, ಬಿ.ಎಂ.ಟಿ.ಸಿ ಕಟ್ಟಡ, ಟಿ.ಟಿ.ಎಂ.ಸಿ 'ಬಿ' ಬ್ಲಾಕ್, 2ನೇ ಮಹಡಿ, ಶಾಂತಿನಗರ, ಬೆಂಗಳೂರು-27. ಇವರ ಕಛೇರಿಯಲ್ಲಿ ಸಲ್ಲಿಸುವುದು.

- ಅರ್ಜಿಯನ್ನು ಸಲ್ಲಿಸಿರುವುದಕ್ಕೆ ಸ್ವೀಕೃತಿ ಪಡೆಯುವುದು ಹಾಗೂ ಕಾರ್ಯ ನಿರ್ವಹಣೆಯಲ್ಲಿ ಪಾಲಿಸಬೇಕಾದ ನಿಯಮಗಳು/ ಷರತ್ತುಗಳ ವಿವರಗಳ ಪಟ್ಟಿ ಅನ್ವಯ ಕಡ್ಡಾಯವಾಗಿ ನಿಯಮಗಳನ್ನು ಅರ್ಹಗೊಳ್ಳುವ ವಾಹನ ಮಾಲೀಕರು ಕಡ್ಡಾಯವಾಗಿ ಪಾಲಿಸತಕ್ಕದ್ದು.

- ಅರ್ಹಗೊಂಡು ಆಯ್ಕೆಯಾದ ವಾಹನ ಮಾಲೀಕರು ತಮಗೆ ನೀಡಿದ ಕಾರ್ಯಾದೇಶದಂತೆ ಕಾರ್ಯನಿರ್ವಹಿಸದಿದ್ದಲ್ಲಿ ಇವರ ಸೇವೆಯನ್ನು ಯಾವುದೇ ಮುನ್ಸೂಚನೆ ಇಲ್ಲದೇ ರದ್ದು ಪಡಿಸುವ ಅಧಿಕಾರವನ್ನು ವಾಣಿಜ್ಯ ತೆರಿಗೆಗಳ ಇಲಾಖೆಯ ಜಂಟಿ ಆಯುಕ್ತರು(ಆಡಳಿತ), ವಿ.ಸ ಮತ್ತು ಸೇ. ತೆ-03, ಶಾಂತಿನಗರ, ಬೆಂಗಳೂರು-560027 ಇವರು ಹೊಂದಿರುತ್ತಾರೆ.

- ಅನಾರೋಗ್ಯವೂ ಸೇರಿದಂತೆ ಅನಿವಾರ್ಯ ಸಂದರ್ಭಗಳಲ್ಲಿ ತಿಂಗಳಲ್ಲಿ **ಎರಡು ದಿನ ಮಾತ್ರ** ಕಛೇರಿ ಮುಖ್ಯಸ್ಥರಿಂದ / ಹಂಚಿಕೆಯಾದ ಅಧಿಕಾರಿಯವರಿಂದ ಅಥವಾ ವಾಹನ ಉಪಯೋಗಿಸುವ ಕಛೇರಿಯ ಅಧಿಕಾರಿಯವರಿಂದ ಅನುಮತಿ ಪಡೆದು, ಮಾಲೀಕ- ಚಾಲಕರು ರಜೆ ಪಡೆಯಬಹುದು. ಆ ಅವಧಿಯಲ್ಲಿ ಬದಲಿ ವಾಹನದ ವ್ಯವಸ್ಥೆಯನ್ನು ಕಡ್ಡಾಯವಾಗಿ ಮಾಡಲೇಬೇಕು. ಈ ಬದಲಿ ವ್ಯವಸ್ಥೆಯು ರಜೆ ಅವಧಿಗೆ ಪೂರ್ಣಪ್ರಮಾಣದಲ್ಲಿ ಇರತಕ್ಕದ್ದು. ಇಲ್ಲದಿದ್ದರೆ, ಗೈರುಹಾಜರಿ ದಿವಸ ಎಂದು ಪರಿಗಣಿಸಿ ಬಾಡಿಗೆ ಕಡಿತಗೊಳಿಸಲಾಗುವುದು. ***ಜೊತೆಗೆ ಸಾರ್ವತ್ರಿಕ ರಜೆ ದಿನಗಳಲ್ಲಿ ಅಗತ್ಯ ಬಿದ್ದಾಗ ತುರ್ತು ಕೆಲಸಗಳ ಸಂದರ್ಭಗಳಲ್ಲಿ ವಾಹನ ಚಾಲಕರು ಹೆಚ್ಚುವರಿ ಬಾಡಿಗೆಯನ್ನು ನಿರೀಕ್ಷಿಸದೆ ಕಛೇರಿ ಕರ್ತವ್ಯ ನಿರ್ವಹಿಸಲು ಸಿದ್ದರಿರಬೇಕು.***

- ಮಾಸಿಕ ಬಾಡಿಗೆ ಆಧಾರದ ಮೇಲೆ ಹಾಗೂ ಆದೇಶದಲ್ಲಿನ ದರಪಟ್ಟಿಗೆ ಒಳಪಟ್ಟು ಮಾತ್ರ ವಾಹನಗಳನ್ನು ಬಾಡಿಗೆಗೆ ಪಡೆಯಲಾಗುತ್ತದೆ.

- ಮಾಲೀಕ–ಚಾಲಕರು ಕಟ್ಟುನಿಟ್ಟಾಗಿ ಸಮಯಪಾಲನೆ ಮಾಡತಕ್ಕದ್ದು. ಕಛೇರಿ ಅಧಿಕಾರಿಗಳು ಸಂಬಂಧಿಸಿದಂತೆ ಎಲ್ಲಾ ಕಛೇರಿ ಕಾರ್ಯ ನಿರ್ವಹಣೆಗೆ ಕಾಲಮಿತಿಯ ನಿರ್ಬಂಧವಿಲ್ಲದೆ ನಿರ್ವಹಿಸತಕ್ಕದ್ದು. ವಾಹನ ಉಪಯೋಗಿಸುವ ಕಛೇರಿಯ ಮುಖ್ಯಸ್ಥರು / ಹಂಚಿಕೆಯಾದ ಅಧಿಕಾರಿಯವರಿಂದ ಈ ಕುರಿತು ದೂರುಗಳು ಬಂದಲ್ಲಿ ಅಂತಹ ವಾಹನದ ಬಳಕೆಯನ್ನು ತಕ್ಷಣ ನಿಲ್ಲಿಸುವ ಅಥವಾ ಒಪ್ಪಂದವನ್ನು ರದ್ದುಪಡಿಸುವ ಅಧಿಕಾರ ಜಂಟಿ ಆಯುಕ್ತರವರು ಹೊಂದಿರುತ್ತಾರೆ.
- ಇಲಾಖೆಯ ಈ ವಿಭಾಗದ ಪ್ರತಿ ಕಛೇರಿಯಲ್ಲಿ ಉಪಯೋಗಿಸುವ ಪ್ರತಿ ವಾಹನಕ್ಕೆ ಸಂಬಂಧಿಸಿದಂತೆ ನಿಗದಿತ ಲಾಗ್ ಪುಸ್ತಕವನ್ನು ನಿರ್ವಹಿಸಿ ಪ್ರತಿ ದಿನದ ಆರಂಭ ಮತ್ತು ಅಂತ್ಯದವರೆಗಿನ ವಾಹನ ಓಡಾಟದ ಸಂಬಂಧ ಈ ಪುಸ್ತಕದಲ್ಲಿ ಅಗತ್ಯ ದಾಖಲೆಗಳನ್ನು ನಮೂದಿಸಿ ವಾಹನವನ್ನು ಉಪಯೋಗಿಸಿದ ಅಧಿಕಾರಿಯವರಿಂದ ರುಜು ಪಡೆಯತಕ್ಕದ್ದು.
- ಈ ವಿಭಾಗದ ಪ್ರತಿ ಕಛೇರಿಯಲ್ಲಿ ಉಪಯೋಗಿಸುವ ವಾಹನ ಓಡಾಟಕ್ಕೆ ಸಂಬಂಧಿಸಿದಂತೆ ಆಯಾ ದಿನದ ಆರಂಭಿಕ ಮತ್ತು ಅಂತಿಮ ಸಮಯದ ಗಣನೆ ಮತ್ತು ಕಿಲೋಮೀಟರ್‌ನ ಗಣನೆಯು ಆಯಾ ಕಛೇರಿಯ ಆವರಣದಿಂದ ಕಛೇರಿ ಕಾರ್ಯದ ನಿಮಿತ್ತ ಆ ವಾಹನ ಹೊರಡುವ ಕ್ಷಣದಿಂದ ಪ್ರಾರಂಭವಾಗುತ್ತದೆ ಹಾಗೂ ಆ ದಿನದ ಕಾರ್ಯ ಮುಗಿದ ಮೇಲೆ ಅದೇ ಸ್ಥಳಗಳಲ್ಲಿ ಕೊನೆಗೊಳ್ಳುತ್ತದೆ.
- ಯಾವುದೇ ತಿಂಗಳಿನ ವಾಹನ ಬಾಡಿಗೆ ಹಣವನ್ನು ಅದರ ಮುಂದಿನ ತಿಂಗಳು ವಾಹನ ಮಾಲೀಕರು ಸಲ್ಲಿಸುವ ಬಿಲ್ಲಿನ ಆಧಾರದ ಮೇಲೆ ಪಾವತಿಸಲಾಗುವುದು. ಕಛೇರಿ ಮುಖ್ಯಸ್ಥರಿಂದ/ ಹಂಚಿಕೆಯಾದ ಅಧಿಕಾರಿಯವರಿಂದ ವಾಹನದ ಲಾಗ್ ಪುಸ್ತಕದ ಆ ತಿಂಗಳಿಗೆ ಸಂಬಂಧಿಸಿದಂತೆ ವಾಹನ ಚಾಲನೆಯ ಬಗೆಗಿನ ದೃಢೀಕೃತವಾದ ನಕಲು ಪ್ರತಿ ಮತ್ತು ವಾಹನ ಉಪಯೋಗಿಸಿದ ಕಛೇರಿಯ ಮುಖ್ಯಸ್ಥರು / ಹಂಚಿಕೆಯಾದ ಅಧಿಕಾರಿಯವರಿಂದ ಸೂಕ್ತ ಪ್ರಮಾಣ ಪತ್ರದ ಜೊತೆಗೆ ವಾಹನದ ಬಾಡಿಗೆಯ ಬಿಲ್ಲನ್ನು ಪ್ರತಿ ತಿಂಗಳ 5ನೇ ತಾರೀಖಿನೊಳಗೆ ಸಲ್ಲಿಸತಕ್ಕದ್ದು.
- ವಾಹನವನ್ನು ಸರ್ಕಾರಿ ಕೆಲಸಕ್ಕೆ ಉಪಯೋಗಿಸುವಾಗ **"ಸರ್ಕಾರಿ ಕೆಲಸದ ಸೇವೆಯಲ್ಲಿ"** ಎಂಬ ನಾಮಫಲಕವಿರಬೇಕು. ಪಾರ್ಕಿಂಗ್ ಶುಲ್ಕ, ಟೋಲ್ ಶುಲ್ಕ ಹಾಗೂ ಇತ್ಯಾದಿಗಳನ್ನು ವಾಹನ ಮಾಲೀಕರೇ / ಚಾಲಕರೇ ಭರಿಸತಕ್ಕದ್ದು.
- ವಾಹನವನ್ನು ಚಾಲನೆ ಮಾಡುವಾಗ ಮತ್ತು ಕರ್ತವ್ಯದಲ್ಲಿರುವಾಗ ಕಡ್ಡಾಯವಾಗಿ ಸಮವಸ್ತ್ರವನ್ನು ಧರಿಸತಕ್ಕದ್ದು.

- ವಾಹನದ ಯಾವುದೇ ಕಾನೂನು ಉಲ್ಲಂಘನೆಗೆ ಸ್ವತಃ ಮಾಲೀಕರೇ ಜವಾಬ್ದಾರರಾಗಿರುತ್ತಾರೆ.
- ವಾಹನವು ಕಛೇರಿಯ ಕೆಲಸಕ್ಕೆ ಉಪಯೋಗಿಸಿದ ನಂತರ ಸಂಬಂಧಪಟ್ಟ ಅಧಿಕಾರಿಗಳಿಂದ ಕಾಲಕಾಲಕ್ಕೆ ಸರಿಯಾಗಿ ಉಪಯೋಗಿಸಿದ ವಿವರದೊಂದಿಗೆ ಟ್ರಿಪ್ ಶೀಟಿನಲ್ಲಿ ಭರ್ತಿ ಮಾಡಿ ಸಹಿ ಮಾಡುವುದು.
- ಈ ಇಲಾಖೆಗೆ ಹೊರಗುತ್ತಿಗೆ ಆಧಾರದ ಮೇಲೆ ವಾಹನವನ್ನು ಪಡೆದಿರುವಂತಹ ಅವಧಿಯಲ್ಲಿ ಬೇರೆ ಯಾವುದೇ ಇಲಾಖೆಯಲ್ಲಿ ಅಥವಾ ಖಾಸಗಿ ಸಂಸ್ಥೆಯಲ್ಲಿ ಅಥವಾ ಬೇರೆ ಇನ್ನಾವುದೇ ಕೆಲಸಗಳಿಗೆ ವಾಹನಗಳನ್ನು ಉಪಯೋಗಿಸುವಂತಿಲ್ಲ ಹಾಗೂ ವಾಹನವನ್ನು ಪೂರ್ಣವಾಗಿ "ವಾಣಿಜ್ಯ ತೆರಿಗೆ ಇಲಾಖಾ ಸೇವೆಗಾಗಿ" ಮೀಸಲಿಡತಕ್ಕದ್ದು."
- ಈ ಭಾಗದ ಅಧಿಕಾರಿಗಳು ರಜೆ/ ಅನ್ಯಸೇವೆ/ ಇನ್ಯಾವುದೇ ಕಛೇರಿ ಕಾರ್ಯನಿಮಿತ್ತ ಕಛೇರಿಯಿಂದ ಹೊರಗೆ ತೆರಳಿದ ಸಂದರ್ಭದಲ್ಲಿ ಅವರಿಗೆ ಸಂಬಂಧಿಸಿದ ವಾಹನ ಚಾಲಕರು ಆ ದಿನ ಪೂರ್ವಾಹ್ನ 10–00 ಗಂಟೆಗೆ ಕಡ್ಡಾಯವಾಗಿ ವಾಣಿಜ್ಯ ತೆರಿಗೆಗಳ ಸಹಾಯಕ ಆಯುಕ್ತರು (ಕೇಂ.ಕ) ಇವರ ಬಳಿ ವರದಿ ಮಾಡಿಕೊಂಡು ಕಛೇರಿ ಆವರಣದಲ್ಲಿಯೇ ವಾಹನದೊಂದಿಗೆ ಇರತಕ್ಕದ್ದು. ಇಲ್ಲದಿದ್ದ ಪಕ್ಷದಲ್ಲಿ ಗೈರು ಹಾಜರು ಎಂದು ಪರಿಗಣಿಸಿ ಆ ದಿನದ ಸಂಭಾವನೆಯನ್ನು ಕಡಿತಗೊಳಿಸಲಾಗುವುದು.
- ಖಾಸಗಿ ವಾಹನ ಮಾಲೀಕರು ಮಾಸಿಕ ಬಾಡಿಗೆಗೆ ಸಂಬಂಧಿಸಿದಂತೆ ಈ ಕಛೇರಿಗೆ ಬಿಲ್ಲಿಗಳನ್ನು ಸಲ್ಲಿಸುವಾಗ ಮಾಹೆಯಲ್ಲಿ ಕರ್ತವ್ಯಕ್ಕೆ ಹಾಜರಾದ ದಿನಗಳು, ಒಟ್ಟು ಓಡಿಸಿದ ಕಿಲೋಮೀಟರ್ ಮತ್ತು ಸಮಯಕ್ಕೆ ಸಂಬಂಧಿಸಿದ ದೃಢೀಕೃತ ಪ್ರಮಾಣ ಪತ್ರವನ್ನು ಅಧಿಕಾರಿಗಳಿಂದ ಪಡೆದು ಬಿಲ್ಲಿನ ಜೊತೆ ಸಲ್ಲಿಸುವುದು.
- ಮೇಲಿನ ಷರತ್ತು ಮತ್ತು ನಿಬಂಧನೆಗಳನ್ನು ಪಾಲಿಸದಿರುವುದು ಮತ್ತು ನಿರ್ಲಕ್ಷಿಸಿರುವುದು ಕಂಡುಬಂದಲ್ಲಿ ಯಾವುದೇ ಸೂಚನೆ ನೀಡದೇ ಹೊರಗುತ್ತಿಗೆ ಆಧಾರದ ಕರಾರನ್ನು ರದ್ದುಪಡಿಸಲಾಗುವುದು.
- ವಾಹನ ಚಾಲಕರು ಒಂದು ವೇಳೆ ಕರಾರು ಒಪ್ಪಂದವನ್ನು ರದ್ದುಪಡಿಸಬೇಕಾದರೆ, ಒಂದು ತಿಂಗಳು ಮುಂಚಿತವಾಗಿ ಈ ಕಛೇರಿಗೆ ಲಿಖಿತ ಮೂಲಕ ತಿಳಿಸಬೇಕು. ತಪ್ಪಿದ್ದಲ್ಲಿ ಒಂದು ತಿಂಗಳ ವಾಹನದ ಬಾಡಿಗೆ ಮೊತ್ತವನ್ನು ನೀಡುವುದಿಲ್ಲ ಹಾಗೂ ಇದಕ್ಕೂ ಮೊದಲು ಸಹ ಕರಾರು ರದ್ದುಗೊಳಿಸುವ ಹಕ್ಕು ಆಯುಕ್ತರು / ಜಂಟಿ ಆಯುಕ್ತರವರದ್ದಾಗಿರುತ್ತದೆ.
- ಆದಾಯ ತೆರಿಗೆ, ಸೇವಾ ತೆರಿಗೆ ಹಾಗೂ ಮುಂದೆ ಉದ್ಭವಿಸಬಹುದಾದ ಯಾವುದೇ ರೀತಿಯಲ್ಲಿ ಸರ್ಕಾರಕ್ಕೆ ಕಠಾವಣೆ ಮಾಡಿ ಸಲ್ಲಿಸಬೇಕಾದ ಮೊತ್ತವನ್ನು ಕಡಿತಗೊಳಿಸಿ ಉಳಿದ ಮೊತ್ತವನ್ನು ಪಾವತಿಸಲಾಗುವುದು.

- ಯಾವುದೇ ಮುನ್ಸೂಚನೆ ನೀಡದೆ ಚಾಲಕರ ಸೇವೆಯನ್ನು ರದ್ದುಗೊಳಿಸುವ ಅಧಿಕಾರವನ್ನು ವಾಣಿಜ್ಯ ತೆರಿಗೆ ಇಲಾಖೆಯ ಜಂಟಿ ಆಯುಕ್ತರು (ಆಡಳಿತ), ವಿ. ಸ ಮತ್ತು ಸೇ ತೆ-3, ಶಾಂತಿನಗರ, ಬೆಂಗಳೂರು-27 ಇವರು ಹೊಂದಿರುತ್ತಾರೆ.
- ***ದಿನಾಂಕ: 15/07/2017 ರ ಪ್ರಕಟಣೆಯಂತೆ ಈಗಾಗಲೇ ಅರ್ಜಿಯನ್ನು ಸಲ್ಲಿಸಿರುವ ಅರ್ಜಿದಾರರು ಸಹ ಪುನಃ ಹೊಸದಾಗಿ ಅರ್ಜಿಯನ್ನು ಸಲ್ಲಿಸಬೇಕು.***

ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು (ಆಡಳಿತ),
ವಿಭಾಗೀಯ ಸರಕು ಮತ್ತು ಸೇವಾ ತೆರಿಗೆ ಕಛೇರಿ-3,
ಶಾಂತಿನಗರ, ಬೆಂಗಳೂರು.